JUNE 03, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

1). ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ – ಎಂ.ಬಿ. ಪಾಟೀಲ.

2). ಮೇಕ್ ಇನ್ ಇಂಡಿಯಾ ಪಾತ್ರ, ದೇಶದ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಮಹತ್ತರ – ಪ್ರಲ್ಹಾದ್ ಜೋಶಿ.

3). 'ಗೃಹ ಆರೋಗ್ಯ ಯೋಜನೆ'; ರಾಜ್ಯಾದ್ಯಂತ ಮನೆ ಬಾಗಿಲಿಗೆ ಆರೋಗ್ಯ ಸೇವೆ.

4). ಸಾಂಕ್ರಾಮಿಕ ರೋಗಗಳ ಹತೋಟಿಗೆ, ಜನ ಜಾಗೃತಿ.

<><><>

ಈಗ ವಾರ್ತೆಗಳ ವಿವರ

<><><>

ಉತ್ತರ ಕರ್ನಾಟಕದಲ್ಲಿ, ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಲಾಗಿದೆ ಎಂದು, ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಧಾರವಾಡದ ಕೋಟೂರು, ಬೇಲೂರು ಕೈಗಾರಿಕೆ ಅಭಿವೃದ್ಧಿ ವಲಯದಲ್ಲಿ, ನೈಡೆಕ್ – ಖಾಸಗಿ ಕೈಗಾರಿಕೆಯ, ನೂತನ ಘಟಕ ಉದ್ಘಾಟಿಸಿ, ಮೂರು ಸಾವಿರ ಜನರಿಗೆ ಉದ್ಯೋಗವನ್ನು ನೀಡುವ ಗುರಿಯನ್ನು, ಈ ಕಂಪೆನಿ ಹೊಂದಿದೆ ಎಂದರು. ರಾಜ್ಯದ ನೂತನ ಕೈಗಾರಿಕಾ ನೀತಿ ಅಡಿ, ಕೈಗಾರಿಕೆಗಳ ಹೂಡಿಕೆಗೆ, ರಿಯಾಯಿತಿ ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಫ್ರಾನ್ಸ್ ಹಾಗೂ ಜಪಾನ್ ತಂತ್ರಜ್ಞಾನ ಆಧರಿಸಿ, ಡೇಟಾ ಸೆಂಟರ್ ಉದ್ಯಮ ತಾಂತ್ರಿಕತೆ ಹಾಗೂ ಯಾಂತ್ರಿಕತೆ ನಿರ್ಮಾಣವಾಗಲಿದೆ. ಅಮೆರಿಕ, ಯುರೋಪ್ ಸೇರಿದಂತೆ, ಜಾಗತಿಕ ಮಾರುಕಟ್ಟೆಗೆ ರಫ್ತು ಮಾಡುವ ಗುರಿಯನ್ನು, ನೈಡೆಕ್ ಹೊಂದಿದೆ ಎಂದು ಸಚಿವರು ಹೇಳಿದರು.

<><><>

ಭಾರತ, ವಿಶ್ವದ ನಾಲ್ಕನೇ ಅತೀ ದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳೆದಿದೆ; ದೇಶದ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ ಯೋಜನೆಗಳ ಕೊಡುಗೆ, ಗಣನೀಯ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ಧಾರವಾಡದಲ್ಲಿ, ದೀನ್ ದಯಾಳ್ ಉಪಾಧ್ಯಾಯ, ಸೌಹಾರ್ದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿ ನಿಲಯ ಉದ್ಘಾಟಿಸಿ, ಮಾತನಾಡಿದರು. ದೇಶದಲ್ಲಿ ಹೇರಳ ಯುವ ಮಾನವ ಸಂಪನ್ಮೂಲವಿದೆ. ಸ್ಕಿಲ್ ಇಂಡಿಯಾ ಯೋಜನೆ ಅಡಿ, ಯುವ ಸಮೂಹಕ್ಕೆ ಗುಣಮಟ್ಟದ ಶಿಕ್ಷಣ ಹಾಗೂ ಕ್ಷೇತ್ರ ಬಯಸುವ, ವೃತ್ತಿ ಕೌಶಲ ತರಬೇತಿ ಆದ್ಯತೆಯಾಗಿದೆ ಎಂದರು.

<><><>

ರಾಜ್ಯದ ಜನತೆಗೆ, 'ಪಂಚ ಖಾತ್ರಿ' ಯೋಜನೆಗಳ ಜೊತೆ, ಸಮರ್ಪಕ ಆರೋಗ್ಯ ಸೇವೆ ಕಲ್ಪಿಸಲು, 'ನಮ್ಮ ಕ್ಲಿನಿಕ್' ಗಳನ್ನು ಆರಂಭಿಸಲಾಗಿದೆ ಎಂದು, ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಗದಗ ಜಿಲ್ಲೆ ರಾಮನಗರದಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ, ನೂತನ 'ನಮ್ಮ ಕ್ಲಿನಿಕ್'ಗೆ ಚಾಲನೆ ನೀಡಿ, ಅವರು ಮಾತನಾಡಿದರು. ಜನರ ಆರೋಗ್ಯ ಸುಧಾರಣೆ ಹಾಗೂ ಜೀವನದ ಗುಣಮಟ್ಟ ಉನ್ನತೀಕರಿಸಲು, ರಾಜ್ಯ ಸರ್ಕಾರ ಒತ್ತು ನೀಡಿದೆ ಎಂದರು.

<><><>

ಮನೆ ಬಾಗಿಲಿಗೆ ಆರೋಗ್ಯ ಸೇವೆ ಹಾಗೂ ಅಗತ್ಯ ಔಷಧಿ ವಿತರಿಸುವ, 'ಗೃಹ ಆರೋಗ್ಯ' ಯೋಜನೆ, ರಾಜ್ಯಾದ್ಯಂತ ವಿಸ್ತರಿಸಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ, ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಬೆಂಗಳೂರು ವಿಕಾಸಸೌಧದಲ್ಲಿ, ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ವಹಣೆಗಾಗಿ ರೂಪಿತವಾದ, "ಗೃಹ ಆರೋಗ್ಯ" ಯೋಜನೆಯ ಕಾರ್ಯಗಾರದಲ್ಲಿ, ಆಶಾ ಕಾರ್ಯಕರ್ತೆಯರ ಕೈಪಿಡಿಯನ್ನು ಬಿಡುಗಡೆಗೊಳಿಸಿ, ಮಾತನಾಡಿದರು. ಗೃಹ ಆರೋಗ್ಯ ಯೋಜನೆ, 2024ರ ಅಕ್ಟೋಬರ್‌ನಲ್ಲಿ, ಕೋಲಾರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿತ್ತು. ಈಗ ರಾಜ್ಯಾದ್ಯಂತ ವಿಸ್ತರಣೆಯಾಗಿದೆ ಎಂದರು.

<><><>

ಬಳ್ಳಾರಿ ಜಿಲ್ಲೆಯ ಮಕ್ಕಳಲ್ಲಿ ಅಪೌಷ್ಟಿಕತೆ ಮಟ್ಟ, ಶೇಕಡ 3 ದಶಾಂಶ 9 ರಷ್ಟು ದಾಖಲಾಗಿದೆ. ಅಪೌಷ್ಟಿಕತೆಯ ಮಧ್ಯಮ ವರ್ಗದ ಮಾನದಂಡದಲ್ಲಿ, ಹಳದಿ ವಲಯದ ವ್ಯಾಪ್ತಿಯಲ್ಲಿ, 4 ಸಾವಿರದ 400 ಮಕ್ಕಳನ್ನು ಗುರುತಿಸಲಾಗಿದೆ. ಆ ಪೈಕಿ, 174 ಮಕ್ಕಳು ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ, ಉಪ ನಿರ್ದೇಶಕ ಕೆ.ಎಚ್. ವಿಜಯ ಕುಮಾರ ತಿಳಿಸಿದ್ದಾರೆ.

<><><>

ಕೆ.ಎಚ್. ವಿಜಯಕುಮಾರ ಧ್ವನಿ 48 ಸೆಕೆಂದುಗಳು

<><><>

ಪರಿಶಿಷ್ಟ ಸಮುದಾಯಗಳ, 101 ಉಪ ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕಾಗಿ, ನ್ಯಾಯಮೂರ್ತಿ ಎಚ್.ಎನ್ ನಾಗಮೋಹನದಾಸ್, ಏಕ ಸದಸ್ಯ ಆಯೋಗ, ರಾಜ್ಯಾದ್ಯಂತ ಕೈಗೊಂಡಿರುವ ಜಾತಿ ಜನಗಣತಿ ಸಮೀಕ್ಷೆಯನ್ನು, ಈ ತಿಂಗಳ 6ನೇ ತಾರೀಖಿನ ವರೆಗೆ ವಿಸ್ತರಿಸಲಾಗಿದೆ. ಆಪ್ ಮೂಲಕ, ಆನ್ ಲೈನ್ ನೋಂದಣಿ ಹಾಗೂ ಮಾಹಿತಿ ಒದಗಿಸಲು, ದಿನಾಂಕ 8ರ ವರೆಗೆ, ಅವಕಾಶ ನೀಡಲಾಗಿದೆ ಎಂದು, ಆಯೋಗದ ಕಾರ್ಯದರ್ಶಿ ಮಾಹಿತಿ ನೀಡಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕಿನ, ಮುನವಳ್ಳಿ ಹೋಬಳಿ ವ್ಯಾಪ್ತಿಯ ಜಕಬಾಳ, ತೆಗ್ಗಿಹಾಳ ಹಾಗೂ ಅವರಗಾಳ ಗ್ರಾಮಗಳಲ್ಲಿ, ಮತ್ತಿಕೊಪ್ಪ ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆ ವತಿಯಿಂದ, ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಜರುಗಿತು. ಕೃಷಿ ವಿಜ್ಞಾನ ಕೇಂದ್ರದ ನಿರ್ದೇಶಕ, ಮಂಜುನಾಥ ಚೌರಡ್ಡಿ ಹಾಗು ವಿಜ್ಞಾನಿಗಳು, ರೈತರೊಂದಿಗೆ ಸಮಾಲೋಚಿಸಿದರು.

<><><>

ಬಳ್ಳಾರಿ ಜಿಲ್ಲೆ ಕುರುಗೋಡು ತಾಲೂಕು, ಹೊಸ ಗೆಣಿಕೆಹಾಳ ನಲ್ಲಿ, ಹಗರಿ ಕೃಷಿ ವಿಜ್ಞಾನ ಕೇಂದ ಹಾಗೂ, ಕೃಷಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ, ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನದಲ್ಲಿ, ಕೃಷಿ ವಿಜ್ಞಾನಿ ರವಿ, ರೈತರ ಸಮಸ್ಯೆಗಳನ್ನು ಆಲಿಸಿ, ವಿವಿಧ ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

<><><>

ಕೇಂದ್ರ ಕೃಷಿ ಮಂತ್ರಾಲಯ ಆಯೋಜಿಸಿರುವ, ವಿಕಸಿತ ಕೃಷಿ ಸಂಕಲ್ಪ ಅಭಿಯಾನ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮೂಲಕ ಜರುಗುತ್ತಿದೆ.

<><><>

ಧಾರವಾಡ ಜಿಲ್ಲೆಯಾದ್ಯಂತ, ಕೃಷಿ ಚಟುವಟಿಕೆಗಳು ಗರಿಗೆದರಿದೆ. ವಾಡಿಕೆಯಂತೆ, ಉತ್ತಮವಾಗಿ ಸುರಿದ ಮುಂಗಾರು ಮಳೆ, ತುಸು ಬಿಡುವು ನೀಡಿದ ಹಿನ್ನೆಲೆ, ರೈತಾಪಿ ವರ್ಗ, ಭೂಮಿ ಹದ, ಹರಗುವುದು ಮತ್ತು ಬಿತ್ತನೆ ಚಟುವಟಿಕೆಯಲ್ಲಿ ತೊಡಗಿದೆ. ಬಿತ್ತನೆ ಬೀಜ ಹಾಗೂ ರಸ ಗೊಬ್ಬರಗಳ ಲಭ್ಯತೆ ಬಗ್ಗೆ, ಕೃಷಿ ಇಲಾಖೆ ಜಂಟಿ ನಿರ್ದೇಶಕ, ಮಂಜುನಾಥ ಅಂತರವಳ್ಳಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಮಂಜುನಾಥ ಅಂತರವಳ್ಳಿ ಧ್ವನಿ 64 ಸೆಕೆಂದುಗಳು

<><><>

ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ಮನೆ ಸುತ್ತಮುತ್ತಲಿನ ಪರಿಸರ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ, ನೈರ್ಮಲ್ಯ ಹಾಗೂ ಸ್ವಚ್ಛತೆ ಕಾಪಾಡುವಂತೆ, ರಾಯಚೂರು ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಸುರೇಂದ್ರ ಬಾಬು ಕೋರಿದ್ದಾರೆ. ನಗರದ ಬಾಲಕಿಯರ ಪದವಿ ಪೂರ್ವ ಕಾಲೇಜು ಆವರಣದಲ್ಲಿ, ಸಾಂಕ್ರಾಮಿಕ ಡೆಂಘಿ ರೋಗ ತಡೆಗಟ್ಟುವ ಬಗ್ಗೆ, ಜನ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಜೂನ್ ತಿಂಗಳಿನಿಂದ ಅಕ್ಟೋಬರ್ ತನಕ, ಈಡಿಸ್ ಸೊಳ್ಳೆಗಳು ಉಲ್ಬಣಗೊಳ್ಳುತ್ತವೆ. ಡೆಂಘಿ, ಚಿಕೂನ್ ಗುನ್ಯಾ, ಝೀಕಾ, ಹಳದಿ ಜ್ವರ ಹರಡುವ ಸೊಳ್ಳೆಗಳ ಬಗ್ಗೆ ಮುನ್ನೆಚ್ಚರಿಕ ಅಗತ್ಯ ಎಂದರು.

<><><>

ಮಳೆಗಾಲದಲ್ಲಿ, ಸೊಳ್ಳೆಗಳಿಂದ ಹರಡಬಹುದಾದ ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ, ಮೈಸೂರು ಮಹಾನಗರ ಪಾಲಿಕೆ ಆರೋಗ್ಯಾಧಿಕಾರಿ ಡಾಕ್ಟರ್ ವೆಂಕಟೇಶ್, ಜನತೆಯಲ್ಲಿ ಮನವಿ ಮಾಡಿದ್ದಾರೆ.

<><><>

ಪ್ರತಿಷ್ಠಿತ ಬೂಕರ್ ಪ್ರಶಸ್ತಿ ವಿಜೇತ, ಹಾರ್ಟ್ ಲ್ಯಾಂಪ್ ಕೃತಿಗಾರ್ತಿ, ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಭಾಸ್ತಿ ಅವರಿಗೆ, ತಲಾ 10 ಲಕ್ಷ ರೂಪಾಯಿ ಪುರಸ್ಕಾರ ನೀಡುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ, ಅಭಿನಂದನಾ ಸಮಾರಂಭದಲ್ಲಿ, ಉಭಯರನ್ನು ಸನ್ಮಾನಿಸಿ, ಅವರು ಮಾತನಾಡಿದರು. ತಮ್ಮ ಕೃತಿಗಳ ಮೂಲಕ, ಮಾನವೀಯ ಸಂದೇಶ ನೀಡುವ ಕಾರ್ಯವನ್ನು, ಬಾನು ಮುಷ್ತಾಕ್ ಸಮರ್ಥವಾಗಿ, ನಿರ್ವಹಿಸಿದ್ದಾರೆ ಎಂದು ಮುಖ್ಯಮಂತ್ರಿ ಶ್ಲಾಘಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

ಬೆಳಗಾವಿಯ ಕೆಎಲ್ಇ ಡೀಮ್ಡ್ ವಿಶ್ವವಿದ್ಯಾಲಯದ, 15 ನೇ ಘಟಿಕೋತ್ಸವ ಇಂದು ಜರುಗಲಿದೆ. ಬೆಳಗ್ಗೆ 9.30 ಕ್ಕೆ ಆರಂಭಗೊಳ್ಳುವ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಜಗತ ಪ್ರತಾಪ ನಡ್ಡಾ ಅವರು ಪಾಲ್ಗೊಂಡು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಗದಗ ಜಿಲ್ಲೆ ಭೇಟಿ ನೀಡಲಿದ್ದು, ಲಕ್ಕುಂಡಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ, ಲಕ್ಕುಂಡಿ ಗ್ರಾಮದ ಇತಿಹಾಸ ಉತ್ಖನನ ಕಾರ್ಯಕ್ಕೆ ಚಾಲನೆ ನೀಡಲಿದ್ದಾರೆ.

ಐ.ಪಿ.ಎಲ್– ಇಂಡಿಯನ್ ಪ್ರೀಮಿಯರ್ ಲೀಗ್, 18 ನೇ ಅವೃತ್ತಿಯ ಅಂತಿಮ ಪಂದ್ಯವು, ಇಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಬೆಂಗಳೂರು ತಂಡವು ಪಂಜಾಬ್ ತಂಡವನ್ನು ಎದುರಿಸಲಿದೆ. ಪಂದ್ಯ ಸಾಯಂಕಾಲ, 07.30ಕ್ಕೆ ಆರಂಭವಾಗಲಿದೆ.

ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಕೆ.ಮನ್ಮಥ ರಾವ್ ಬೆಂಗಳೂರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

1). ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ – ಎಂ.ಬಿ. ಪಾಟೀಲ.

2). ಮೇಕ್ ಇನ್ ಇಂಡಿಯಾ ಪಾತ್ರ, ದೇಶದ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಮಹತ್ತರ – ಪ್ರಲ್ಹಾದ್ ಜೋಶಿ.

3). 'ಗೃಹ ಆರೋಗ್ಯ ಯೋಜನೆ'; ರಾಜ್ಯಾದ್ಯಂತ ಮನೆ ಬಾಗಿಲಿಗೆ ಆರೋಗ್ಯ ಸೇವೆ.

4). ಸಾಂಕ್ರಾಮಿಕ ರೋಗಗಳ ಹತೋಟಿಗೆ, ಜನ ಜಾಗೃತಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>